BANGALORE UNIVERSITY

ಪ.ವಿ.–8/ಮ.ಮೌ/ಸ್ನಾತಕೋತ್ತರ/ಪ.ಜಾ.ಪ.ಪಂ.ಪ್ರವರ್ಗ–1ಶು.ರಿ/2017–18.

ಕುಲಸಚಿವರು (ಮೌ) ರವರ ಕಛೇರಿ
ಜ್ಞಾನಭಾರತಿ ಪರೀಕ್ಷಾ ಭವನ
ಬೆಂಗಳೂರು – 560056
ದಿನಾಂಕ: 21.04.2017.

## ಅಧಿಸೂಚನೆ

**ವಿಷಯ:** ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೆ ಮರುಮೌಲ್ಯಮಾಪನ ಶುಲ್ಕ ರಿಯಾಯಿತಿ ಬಗ್ಗೆ.

**ಉಲ್ಲೇಖ:** 1.ಸರ್ಕಾರದ ಆದೇಶ ಸಂಖ್ಯೆ: ಸಕಇ 178 ಪಕವಿ 2015, ದಿನಾಂಕ: 31.12.2015.
2.ಕುಲಪತಿಗಳ ಒಪ್ಪಿಗೆ ದಿನಾಂಕ 10.04.2017.

***

**ಪ್ರಸ್ತಾವನೆ**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಜೂನ್–2016ರ ಪರೀಕ್ಷೆಯವರೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಮರುಮೌಲ್ಯಮಾಪನ ಶುಲ್ಕದಲ್ಲಿ ರಿಯಾಯಿತಿ ನೀಡಿರುವ ಬಗ್ಗೆ ಸರ್ಕಾರಿ ಲೆಕ್ಕ ಪರಿಶೋಧಕರು ಆಕ್ಷೇಪಣೆ ಮಾಡಿರುತ್ತಾರೆ. ಇದರ ಬಗ್ಗೆ ಮರುಮೌಲ್ಯಮಾಪನಕ್ಕೆ ನೀಡುವ ರಿಯಾಯಿತಿಯನ್ನು ಸರ್ಕಾರದಿಂದ ಮರುಭರಣ ಮಾಡಿಕೊಳ್ಳಲು ಅವಕಾಶ ಇದೆಯೇ, ಇದಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳೇನಾದರೂ ಇದೆಯೇ ಎಂದು ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು ಮತ್ತು ಹಿಂದುಳಿದ ವರ್ಗಗಳ ಕೋಶದ ಮುಖ್ಯಸ್ಥರಿಂದ ಸ್ಪಷ್ಟೀಕರಣ ಕೋರಲಾಗಿತ್ತು. ಇದಕ್ಕೆ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು ಮತ್ತು ಹಿಂದುಳಿದ ಕೋಶದ ಮುಖ್ಯಸ್ಥರು ಮರು ಮೌಲ್ಯಮಾಪನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ನೀಡುವ ಶುಲ್ಕ ರಿಯಾಯಿತಿಯನ್ನು ಸರ್ಕಾರದಿಂದ ಮರುಭರಣ ಮಾಡಲು ಸಾಧ್ಯವಿಲ್ಲವೆಂದು ಇದಕ್ಕೆ ಯಾವ ಸರ್ಕಾರಿ ಆದೇಶಗಳು ಇಲ್ಲವೆಂದು ಸ್ಪಷ್ಟೀಕರಣ ನೀಡಿರುತ್ತಾರೆ. ಆದುದರಿಂದ, ಸರ್ಕಾರಿ ಲೆಕ್ಕ ಪರಿಶೋಧಕರ ಆಕ್ಷೇಪಣೆಗಳು ಮತ್ತು ಸಂಬಂಧ ಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿಭಾಗಗಳ ಮುಖ್ಯಸ್ಥರ ಸ್ಪಷ್ಟೀಕರಣಗಳ ಹಿನ್ನೆಲೆಯಲ್ಲಿ ಡಿಸೆಂಬರ್–2016 ರಲ್ಲಿ ಜರುಗಿದ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪರೀಕ್ಷೆಗಳ ಫಲಿತಾಂಶದ ಆಧಾರದ ಮೇಲೆ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಶುಲ್ಕ ರಿಯಾಯಿತಿಯನ್ನು ಡಿಸೆಂಬರ್–2016ರ ಪರೀಕ್ಷೆಯಿಂದ ನೀಡಲಾಗುವುದಿಲ್ಲ.

2–

Scanned by CamScanner

ವಿ.ವಿ.ಆದೇಶ ಸಂಖ್ಯೆ ಪ.ವಿ.-VIII/ಮ.ಮೌ/ಸ್ನಾತಕೋತ್ತರ/ಪ.ಜಾ.ಪ.ಪಂ.ಪ್ರವರ್ಗ-1ಶು.ರಿ/2017-18
ದಿನಾಂಕ 21.04.2017

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಡಿಸೆಂಬರ್-2016ರ ಸ್ನಾತಕೋತ್ತರ ಪದವಿಯ ಪರೀಕ್ಷಾ ಫಲಿತಾಂಶದ ನಂತರ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವ ಎಲ್ಲ ವರ್ಗದ ವಿದ್ಯಾರ್ಥಿಗಳು (ಸ್ನಾತಕ ಪದವಿಯಲ್ಲಿರುವಂತೆ) ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಪೂರ್ತಿ ಹಣವನ್ನು ಪಾವತಿಸಿ ಕಾಲೇಜು ಅಥವಾ ವಿಭಾಗಗಳ ಮೂಲಕ ಅರ್ಜಿ ಸಲ್ಲಿಸಬೇಕಿರುತ್ತದೆ.

ಆದೇಶದ ಮೇರೆಗೆ,

Office of the Registrar (Eva) Bangalore University, Bengaluru

~~ಕುಲಸಚಿವರು (ಮೌಲ್ಯಮಾಪನ)~~ 24/4/17

ಗೆ,

1. ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳು, ಜ್ಞಾನಭಾರತಿ ಮತ್ತು ನಗರಶಾಖೆ.,
2. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಕೋಲಾರ.
3. ಬೆಂಗಳೂರು ವಿಶ್ವವಿದ್ಯಾಲಯದಿಂದ ಸಂಯೋಜಿತಗೊಂಡಿರುವ ಸ್ನಾತಕೋತ್ತರ ಕೋರ್ಸುಗಳ ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳು.
4. ನಿರ್ದೇಶಕರು, ಅಂಚೆ ತೆರಪು ಮತ್ತು ದೂರ ಶಿಕ್ಷಣ ವಿಭಾಗ, ಬೆಂ.ವಿ.ಬೆಂ.

ಪ್ರತಿಗಳು:

1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-01.
2. ನಿರ್ದೇಶಕರು/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ಘಟಕ, ಬೆಂ.ವಿ.ಬೆಂ.
3. ಕುಲಪತಿಯವರು/ಕುಲಸಚಿವರು/ವಿತ್ತಾಧಿಕಾರಿಗಳು ಹಾಗೂ ಇವರುಗಳ ಆಪ್ತಕಾರ್ಯದರ್ಶಿಗಳು, ಆಪ್ತ ಕಾರ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಗಣಕ ಯಂತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
5. ಉಪಕುಲಸಚಿವರು/ಸಹಾಯಕ ಕುಲಸಚಿವರು/ ಅಧೀಕ್ಷಕರುಗಳು ಪರೀಕ್ಷಾ ವಿಭಾಗ,
6. ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬೆಂಗಳೂರು ನಾಗರಭಾವಿ ಶಾಖೆ ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
7. ಕಛೇರಿ ಪ್ರತಿ.

Scanned by CamScanner